ಶ್ರೀ ಶ್ರೀಪಾದರಾಜ ವಿರಚಿತ
ವಾಮನ ಅವತಾರ ಹಾಡು

ಕನ್ನಡ ಭಾಷೆಯಲ್ಲಿ

Rarest Archiver

ವಾಮನ ಅವತಾರ ಹಾಡು

ಅದಿತಾದೇವಿಯು ಪಯೋವ್ರತವ ಮಾಡಿದಳಾಕೆ ।
ಪತಿಯ ಆಜ್ಞಯ ಕೇಳಿಕೊಂಡು ॥
ಪೃಥಿವಿಯನೆಲ್ಲಾ ಆಕ್ರಮಿಸಿದ ಸ್ವಾಮಿ ತಾ ।
ಸುತನಾಗವರಲ್ಲೇ ಜನಿಸಿದನು ॥ 1 ॥

ಜಾತಕರ್ಮವ ಮಾಡಿ ಮಧುವಿಟ್ಟು ಮುದದಿಂದ ।
ಪುಣ್ಯವಾಚನ ಮಾಡಿಕೊಂಡು ॥
ಕೋಟಿ ಗೋದಾನಗಳ ಕೊಟ್ಟ ಕಶ್ಯಪ ತಾನು ।
ಶ್ರೀಕೃಷ್ಣಗೆ ಅರ್ಪಿತವೆಂದ ॥ 2 ॥

ದಶರಾತ್ರಿ ಹೋಯಿತು ಅಸುರ ಸಂಹಾರಿಗೆ ।
ಶಶಿಮುಖಿಯರೆಲ್ಲಾ ನೆರೆದು ॥
ಎಸೆವೊ ಚಿನ್ನದ ತೊಟ್ಟಿಲೊಳಗಿಟ್ಟು
ತೂಗುತ್ತಾ।ಹೆಸರು ಇಟ್ಟರು ವಾಮನನಂತ ॥ 3 ॥

ಅನ್ನಪ್ರಾಶನವ ಮಾಡಿ ಚೌಲಕರ್ಮವ ಬಿಡಿಸಿ ।
ತನ್ನ ಬಂಧುಗಳೆಲ್ಲ ಕರೆಸಿ ॥
ಹನ್ನೆರಡು ವರ್ಷ ತಪವ ಮಾಡಿ ಪಡೆದಾ ।
ಮೋಹನ್ನಂಗ ಮುಂಜಿ ಕಟ್ಟಿದರು ॥ 4 ॥

ಉಪನಯನ ವಾಮನಗೆ ಕಶ್ಯಪ ಮಾಡೆ ।

Rarest Archiver

ಶಚಿ ಸರಸ್ವತಿ ಭಾರತಿಯರು ॥
ಅತಿ ಹರುಷದಿಂದ ಭಿಕ್ಷೆಯ ನೀಡಿ ।
ಮುತ್ತಿನಾಯತಿಯನೆತ್ತಿದರು ಹರುಷದಲಿ ॥ 5 ॥

ದಂಡ ಕಮಂಡಲ ಯಜ್ಞೋಪವೀತವು ।
ಮೌಂಜಿ ಕೃಷ್ಣಾಜಿನ ಧರಿಸಿ ॥
ಅಂದುಗೆ ಕಿರುಗೆಜ್ಜೆ ಸರಪಳಿಯು ಘಿಲ್ಲುಘಿಲ್ಲೆನುತಲಿ।
ಬಂದ ವಾಮನ ಬಲಿರಾಯನ ಸಭೆಗೆ ॥ 6 ॥

ಕೋಟಿ ಸೂರ್ಯಚಂದ್ರಕಾಂತೆ ಶೋಭಿಸುವಂತಾ ।
ನೋಟದಿ ಮುದ್ದಿನ ಮುಖವು ॥
ನೋಟದಿ ಕರುಣಾರಸ ಸೂಸಿ ಹೊಳೆವಂಥಾ ।
ಪ್ರಖ್ಯಾತ ಬಂದ ರಾಜನ ಸಭೆಗೆ ॥ 7 ॥

ವೇದ ಶಾಸ್ತ್ರದಿಂದ ಪೊಗಳೋರು ವಾಮನ ।
ದೇವರಿಲ್ಲಿಗೆ ಬಂದನೆಂದು ॥
ತಾಳ ಮದ್ದಳೆ ಭೇರಿ ಧಿಮಿ ಧಿಮಿ ಧಿಮಿಕೆಂದು ।
ನಾಟ್ಯವಾಡಿದರು ಊರ್ವಶಿ ರಂಭೆ ॥ 8 ॥

ಚತುರ್ಮುಖ ಬ್ರಹ್ಮ ಸ್ತೋತ್ರವ ಮಾಡಿ ಬರುತಿರೆ।
ಪರಮಪುರುಷನೇ ಈತನೆಂದು ॥
ಧರೆಯೊಳಗತಿಚೆಲ್ವ ಸೌಂದರ್ಯ ಪುರುಷನ ।
ಬೆರಗಾಗಿ ನಿಂತು ನೋಡಿದರು ॥ 9 ॥
ಮುತ್ತಿನ ಮಣೆಯ ತಂದಿಟ್ಟನು ಬಲಿರಾಯ ।

Rarest Archiver

ಇತ್ತ ಬನ್ನಿರಿ ಕುಳ್ಳಿರೆನುತ ॥
ಎತ್ತಲಿಂದಲಿ ಬಂದಿರಿ ಏನು ಕಾರಣ ।
ಹಸ್ತವ ಮುಗಿದು ಕೇಳಿದನು ॥ 10 ॥

ಬಹಳ ದೂರದಿಂದ ಬಂದೆನು ಬಲಿ ನಿನ್ನ ।
ಕೀರುತಿ ಮಹಿಮೆಯ ಕೇಳಿ ॥
ಮೂರು ಪಾದಕೆ ಭೂಮಿ ದಾನವ ಕೊಡು ಎಂದು ।
ಬೇಡಿಕೊಂಡನು ಬ್ರಹ್ಮಚಾರಿ ॥ 11 ॥

ಏನು ಬೇಡಿದಿ ಬಡ ಬ್ರಾಹ್ಮಣ ನೀ ।
ಕನಕ ದಾನವ ಕೊಡುವೆ ಕೇಳೆಂದ ॥
ನಾನೊಂದು ಬೇಡುವನಲ್ಲ ಮೂರು ಪಾದ ।
ಭೂಮಿ ಕೊಟ್ಟರೆ ಸಾಕೆಂದ ॥ 12 ॥

ಯಾಚಕನಿವನಲ್ಲ ಯದುಕುಲತಿಲಕನು ।
ಮಾತಿಲಿ ಮನೆಯ ಕೊಂಬುವನು ॥
ಸೂಚನೆ ಮಾಡಿದ ಶುಕ್ರಾಚಾರ್ಯರು ಬಂದು ।
ಜೋಕೆ ಎನುತ ಹೇಳಿದರು ॥ 13 ॥

ಎಷ್ಟು ಹೇಳಿದರು ಇವ ಬಿಟ್ಟು ಹೋಗುವನಲ್ಲ ।
ಸಿಟ್ಟಿಲಿ ಬೈದು ಶಾಪಿಸುವ ॥
ಕೊಟ್ಟೆನು ಯದುಕುಲತಿಲಕಗೆ ದಾನವ ।
ಕೊಟ್ಟ ವಾಕ್ಯವ ತಪ್ಪದ್ಹಾಂಗೆ ॥ 14 ॥

ಹವಳದ ಗಿಂಡಿಲಿ ಉದಕ ತಾರೆನುತಲಿ ।

Rarest Archiver

ತನ್ನ ವಲ್ಲಭೆಗೆ ಹೇಳಿದನು ॥
ಅಂದ ಮಾತನು ಕೇಳಿ ತಂದಳು ಉದಕವಾ ।
ವಿಂಧ್ಯಾವಳಿ ಸಭೆಯಲ್ಲಿ ॥ 15 ॥

ಪನ್ನಂಗ ಶಯನನ ಪಾದಕಮಲವ ತೊಳೆದು ।
ಧನ್ಯನಾದೆನು ನಾನೆಂದು ॥
ಒಂದು ಪಾದವ ತೊಳೆಯಲು ಸುರನದಿ ।
ಸುತ್ತಿ ಹರಿದೀತು ಧಾರುಣಿಯಲಿ ॥ 16 ॥

ಆಕ್ರಮಿಸಿದ ಮೂರು ಲೋಕವನೆಲ್ಲ ।
ತ್ರಿವಿಕ್ರಮ ರೂಪ ತಾನಾಗಿ ॥
ಚೆನ್ನಾಗಿ ತಂದು ವರುಣಪಾಶ ಕಟ್ಟಿದರೆ ।
ಅನ್ಯಾಯವೆಂಬುವರೆ ಜನರು ॥ 17 ॥

ಇನ್ನೊಂದು ಪಾದವ ಇಡಲಿಕ್ಕೆ ಸ್ಥಳವಿಲ್ಲ ।
ಇನ್ನೆಲ್ಲಿ ಇಡಲಿ ಹೇಳೆಂದ ॥
ನೆತ್ತಿಯ ಮೇಲಿಟ್ಟ ನಿಜವುಳ್ಳ ಪಾದವ ।
ಒತ್ತಿದ ಪಾತಾಳದಲ್ಲಿ ॥ 18 ॥

ಇಂದ್ರಗೆ ಲೋಕ ಬಿಡಿಸಿಕೊಟ್ಟು ಬೇಗ ।
ಉಪೇಂದ್ರನೆಂದು ಕರೆಸಿಕೊಂಡಿ ॥
ನಾಭಿಕಮಲದಿಂದ ಬ್ರಹ್ಮದೇವರ ಪಡೆದಿ ।
ನಖದಲ್ಲಿ ಭಾಗೀರಥಿ ಪಡೆದಿ ॥ 19 ॥

Rarest Archiver

ಕೋರೆದಾಡಿಲಿಂದ ತುಂಗಭದ್ರೆಯ ಪಡೆದಿ ।
ನಾರಾಯಣಗೆ ಎದುರಾರುಂಟೆ ॥
ಪಟ್ಟಶಾಸನ ಘಟನ ಮಾಡಿದ ಬಲಿರಾಯಗ ।
ಕೊಟ್ಟಾನು ಸುತಳ ಲೋಕವನು ॥ 20 ॥

ಮೆಚ್ಚಿದೆ ಬಲಿ ನಿನ್ನ ಭಕ್ತಿ ಭಾವಗಳಿಗೆ ।
ಬೇಕಾದ ವರವ ಬೇಡೆಂದ ॥
ಮುಕ್ತಿದಾಯಕ ಸ್ವಾಮಿ ಮನೆಯೊಳಗಿರುವುದು ।
ಇಷ್ಟೆ ವರವೆ ಸಾಕೆಂದ ॥ 21 ॥

ಬಲಿಯ ಬಾಗಿಲ ಕಾಯ್ದ ಭಕ್ತವತ್ಸಲ ಸ್ವಾಮಿ ।
ಶಿಲೆಯನ್ನು ಉದ್ಧರಿಸಿದ ದೇವ ॥
ಬಲವಂತ ರಂಗವಿಠ್ಠಲನ ಪಾದವ ।
ಅನುದಿನ ನೆನೆಕಂಡ್ಯ ಮನವೆ ॥ 22 ॥

Rarest Archiver